SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಪಿಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 136] ಸೋನುವಾರ 28–1–46 [ಬಿಡಿ ಪ್ರತಿ 6 ಪೈ

61-(4)

ಹಿಂದುಸ್ತಾನಿಯು ಭಾರತದ ಪ್ರಾಣವಾಯು

"ಚಿತ್ರಕಲೆಯ ಚಿತ್ರೋದ್ಯಮ ಮಹತ್ಕಾರ್ಯ" ಫಜ್ಲ್ ಭಾಯ್

ಸುಪ್ರಸಿದ್ಧ ಚಿತ್ರೋದ್ಯಮಿ ಗಳಾದ ಶ್ರೀ ಫಜ್ಲ್‌ಬಾಯ್‌ರವರ ಗೌರವಾರ್ಥವಾಗಿ ವೈಸೂರು ನವಜ್ಯೋತಿ ಸ್ಟೂಡಿಯೋವಿನ ಮ್ಯಾನೇಜಿಂಗ್ ಪಾರ್ಟನರ್ ಆದ ಶ್ರೀ ಜಿ. ಆರ್. ರಾಮಯ್ಯನವರು ಸ್ಟೂಡಿಯೋ ಕಛೇರಿಯಲ್ಲಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಅನೇಕ ವ್ಯಾಪಾರಸ್ಥರು ಮೈಸೂರು ಹಲವು ಪತ್ರಿಕಾಕಾರರು ಕೂಟದಲ್ಲಿ ಭಾಗಿಗಳಾಗಿದ್ದರು ಶುಚಿರುಚಿಯಾದ ಉಪಹಾರಾದಿಗಳ ನಂತರ, ಶ್ರೀ ಫಜ್ಲ್‌ಬಾಯ್ ರವರನ್ನು ಅಗಮಿಗಳಿಗೆ ಪರಿಚಯ ಮಾಡಿಸಿ, ಅವರ ಗುಣ ವಿವರ್ತಿಸಿದರು. ಶ್ರೀ ಭಾಯ್‌ರವರು ಸೂಕ್ತವಾಗಿ ಉತ್ತರ ಕೊಡುತ್ತಾ 'ಚಿತ್ರೋದ್ಯಮ ಮಹತ್ಕಾರ್ಯ ಪ್ರತಿಯೊಂದು ತರಹದ ವ್ಯಕ್ತಿಗಳಿಗೂ ಸರಿಯಾಗಿರಬೇಕು" ಎಂದು ನುಡಿಯುತ್ತಾ ತಮ್ಮ ಸಹಕಾರ ನವಜ್ಯೋತಿ ಸ್ಟೂಡಿಯೋಗೆ ಇರುವುದಾಗಿ ತಿಳಿಸಿದರು. ಶ್ರೀಗಳಾದ ಟಿ. ನಾರಾಯಣ, ಗೋಪಾಲಕೃಷ್ಣರಾವ್, ಬಿ. ಎಸ್. ಸುಬ್ಬರಾವ್ ಮತ್ತು ಶ್ರೀಕಂಠಯ್ಯನವರು ಶ್ರೀ ರಾಮಯ್ಯನವರು ಮತ್ತು ಸ್ಟೂಡಿಯೋವನ್ನು ಕುರಿತು ಭಾಷಣ ಮಾಡಿದರು. ಶ್ರೀ ರಾಮಯ್ಯನವರಿಂದ ಪಂದಾನಾರ್ಪಣೆಯಾದ ನಂತರ ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಸಮಾರಂಭ ಮುಕ್ತಾಯವಾಯಿತು.

ಸ್ವಾತಂತ್ರ್ಯದಿನಾಚರಣೆ

ಮೈಸೂರು, ಜ 26—ಮಹಾರಾಜಾ ಕಾಲೇಜು ಬಳಿ ವಿದ್ಯಾರ್ಥಿಗಳು ಈ ದಿವಸ ಬೆಳಿಗ್ಗೆ ಸಭೆ ಸೇರಿ ಮುಂಬಯಿ ಗೋಳಿಬಾರನ್ನು ಖಂಡಿಸಿದರು ಮತ್ತು ಸ್ವಾತಂತ್ರ್ಯ ದಿನಾಚರಣೆ ನಡೆಸಿದರು.

ಮುಂದುವರೆಯಿತು

ಮೈಸೂರು, ಜ 26— ಈ ದಿವಸ ನಡೆಯಬೇಕಿದ್ದ ಸೌಸಭೆಯು ಅನಿವಾರ್ಯ ಕಾರಣ ವಶ 30 ನೇ ತಾರೀಖಿಗೆ ಮುಂದುವರಿಯಿತು. ಕಾರಣ ಹಲವು ಸದಸ್ಯರುಗಳು ಈ ದಿವಸ ಸ್ವಾತಂತ್ರ್ಯ ದಿನಾಚರಣೆ ಮತ್ತು ಮುಂಬಯಿ ಪೋಲಿಸರ ಗುಂಡಿನ ಪ್ರಕರಣವೆಂದು ತಿಳಿಸಿದರು.

ಮುಸೋಲಿನಿಯ ಮೆದಳು

ನ್ಯೂ ಯಾರ್ಕ್ ಜ 21— ಇಲ್ಲಿಗೆ ಮುಸಾಲೆಯಲ್ಲಿ ಇಡಲ್ಪಟ್ಟು ತಂದ ಮುಸೋಲಿನಿಯ ಮೆದಳು ತಲಪಿದೆ. ಅರ್ಧ ಪೆಲ್ಲಾ ಕ್ರಿಮಿಗಳಿಂದ ನಾಶವಾಗಿರುವುದರಿಂದ ಅನನು ಏತರಿಂದ ನಡೆಯುತ್ತಿದ್ದ ಎಂಬುದನ್ನು ನಿರ್ಧರಿಸುವುದು ಶಕ್ಯವಾಗಿರುವುದಿಲ್ಲವೆಂದು ಹೇಳಲಾಗಿದೆ.

ಹಿಂದೂಸ್ತಾನಿ ಭಾಷೆ

ಮದರಾಸು ಜ 25— ಹಿಂದಿ ಪ್ರಚಾರ ಸಭೆಯ ರಜತೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ 'ಮನುಷ್ಯನಿಗೆ ಪ್ರಾಣವಾಯುವು ಹೇಗೋ, ಹಿಂದುಸ್ತಾನಿ ಭಾಷೆಯು ಹಾಗೆ ಭಾರತಕ್ಕೆ ಅವಶ್ಯಕ. ಭಾರತದ ಪ್ರತಿಯೊಬ್ಬ ಪುತ್ರ ಪುತ್ರಿಯರೂ ಈ ಭಾಷೆಯನ್ನು ಕಲಿತು ತನ್ಮೂಲಕ ಸಮ್ಮೇಳನಗಳು ಹೆಚ್ಚು ಪ್ರಸರಿಸುವಂತೆ ಮಾಡುವುದು ತಮ್ಮ ಕರ್ತವ್ಯವಾಗಿದೆ ಎಂದು ತಿಳಿಸಿರುವರು.

ಕಳ್ಳ ವ್ಯಾಪಾರಿಗೆ ಭಾರಿ ಜುಲ್ಮಾನೆ

ಕಡಲೂರು, ಜ 23 — ತಿರುಪಪುಲಿಯೂರಿನ ವೈದ್ಯಲಿಂಗ ಶೆಟ್ಟಿ ಎಂಬವನು ಅನೇಕ ಸಂದರ್ಭಗಳಲ್ಲಿ ಕ್ಯಾಷ್ ಬಿಲ್ಲನ್ನು ಕೊಡಲಿಲ್ಲವೆಂಬ ಆಪಾದನೆ ಮೇಲೆ 1450 ರೂ. ಜುಲ್ಮಾನೆ ವಿಧಿಸಲ್ಪಟ್ಟನು.

ಯು. ಎಸ್. ಓ. ಮುಂದೆ ಪಿಕೆಟ್

ಲಂಡನ್ ಜ 5— ಯು. ಎಸ್. ಓ. ಮಿಟಿಂಗಿನ ಮುಂದೆ 5 ಮಂದಿ ಪಿಕೆಟ್ಟು ಮಾಡುತ್ತಾ, 'ಯು. ಎಸ್. ಓ. ಅಂದರೆ ಸರ್ವರಿಗೂ ಸ್ವಾತಂತ್ರ್ಯ; ಭಾರತದ ವಿಲಿಯಗಟ್ಟಿ ಜನರನ್ನು ಬಂಧವಿನೋಚನೆ ಮಾಡಿರಿ; ಇಂಡೋನೇಷಿಯಾದಿಂದ ಬ್ರಿಟಿಷ್ ಮತ್ತು ಭಾರತ ಸೈನ್ಯವನ್ನು ವಾಪಸ್ ಕರೆಸಿರಿ' ಎಂಬ ಭಾರಿ ನೋಟೀಸನ್ನು ಪ್ರದರ್ಶಿಸುತ್ತಿದ್ದರು.

ಕಂದಾಯ ಮಾಫಿ

ದಕ್ಷಿಣ ಅರ್ಕಾಟ್ ಜಿಲ್ಲೆಯಲ್ಲಿ ಬೆಳೆಯಾಗದಿರುವುದರಿಂದ ರೈತರ ಕಂದಾಯ ಮಾಫಿಯನ್ನು ಕೇಳುತ್ತಿದ್ದಾರೆ.

ರಾಜಕುಮಾರನು ಸ್ವತಂತ್ರ ಚಳುವಳಿಕ್ಕೆ ಸೇರಿದನು

ಹನ್ನಾ ಜ 26— ಅನ್ನಾಮಿನ ರಾಜಕುಮಾರನು, ಗುಲಾಮಿ ಜನರ ರಾಜನಾಗಿರುವುದಕ್ಕಿಂತ ಸ್ವತಂತ್ರ ಜನಾಂಗ ಸಾಮಾನ್ಯ ಪ್ರಜೆಯೊಂದಿಗೆ ವಾಸಿಸುವುದೇ ಲೇಸೆಂದು ಹೇಳಿ, ಸ್ವಾತಂತ್ರ್ಯ ಚಳುವಳಿಗೆ ಸೇರಿರುವುದಾಗಿ ತಿಳಿಯಬಂದಿದೆ.

ವಾಷಿಂಗ್ಟನ್ ಜ 26— ನೇತಿಂಗಳ ಪ್ರಾರಂಭದಲ್ಲಿ 97 ಹಡಗು ಸಮುದಾಯದ ಮೇಲೆ ಪರೀಕ್ಷಾರ್ಥವಾಗಿ ಅಣು ಬಾಂಬು ಪ್ರಯೋಗಿಸಲ್ಪಡುವುದೆಂದು ಹೇಳಲಾಗಿದೆ

ಮದರಾಸು ಜ 26— ಹರಿಜನರಿಗೆ ಪ್ರತ್ಯೇಕ ಕೇರಿಕೇರಿಗಳಿದ್ದು, ಅವರು ನೀರು ತೆಗೆದುಕೊಳ್ಳಲು ಪ್ರತ್ಯೇಕ ಬಾವಿಗಳಿರುವವರೆಗೆ ಸ್ವರಾಜ್ಯ ದೊರೆಯುವುದಿಲ್ಲವೆಂದು ಮಹಾತ್ಮಾ ಗಾಂಧಿಯವರು ರಚನಾತ್ಮಕ ಕೆಲಸಗಾರರ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು

ನಾಗಪುರ ಜ 23— ಪ್ರತಿಬಂಧಕಾಜ್ಞೆಯನ್ನು ನಿರೋಧಿಸಿ, 1000 ಮಂದಿ ಸ್ತ್ರೀಯರು ಈ ವೈಕಿ ಹೆಚ್ಚು ಮಂದಿ ಹರಿಜನರು, ಸರ್ಕಾರಿ ಕೆಛೇರಿಗೆ ಮೆರವಣಿಗೆಯಲ್ಲಿ ಹೋದರು.

ಹೈದರಾಬಾದಿನ ಖಾದಿ ಪ್ರಚಾರ ಸಂಘದ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಧೂತರು ಗಾಂಧೀಜಿಯವರನ್ನು ಹೈದರಾಬಾದಿಗೆ ಬರಬೇಕೆಂದು ಪ್ರಾರ್ಥಿಸಿರುವರು.

ಗಾಂಧೀಜಿ ಗೌರ್ನರರ ಭೇಟಿ

ಮದರಾಸು ಜ 26— ಗಾಂಧೀಜಿಯವರು ಮದರಾಸು ಗೌರ್ನರರನ್ನು ಭೇಟಿ ಮಾಡಿ 80 ನಿಮಿಷ ಮಾತುಕತೆ ನಡೆಸಿದರು.

ಬೊಂಬಾಯಿನಲ್ಲಿ ಶಾಂತಿ

ಬೊಂಬಾಯಿ ಜ 26— ಬೊಂಬಾಯಿನಲ್ಲಿ ಶಾಂತಿ ನೆಲೆಸಿದೆ. ಈ ಬಗ್ಗೆ ಕಾಂಗ್ರೆಸ್ಸಿನ ಶಾಂತಿ ದಳದ ಸೇವೆಯು ಪ್ರಸಂಶನೀಯವಾಗಿದೆ.

ಚಂದ್ರಲೋಕಕ್ಕೆ

ವಾಷಿಂಗ್ಟನ್ ಜ 25 — ಭೂಮಿಗೆ 238000 ಮೈಲಿ ದೂರದಲ್ಲಿರುವ ಚಂದ್ರಲೋಕಕ್ಕೆ ಪ್ರವಾಸ ಮಾಡುವ ಏರ್ಪಾಡು ಇನ್ನು ಹತ್ತು ವರ್ಷಗಳಲ್ಲಿ ಸಾಧ್ಯವಾಗಬಹುದೆಂದು ಹೇಳಲಾಗಿದೆ.

ನೋಟುಗಳ ಕಳ್ಳ ವ್ಯಾಪಾರ

ಕರಾಚಿ ಜ 26— 1000 ರೂ. ನೋಟುಗಳನ್ನು 800 ರೂ. ಗೆ ಮಾರುತ್ತಿದ್ದ ಒಬ್ಬನನ್ನು ಪೋಲೀಸಿನವರು ಹಿಡಿದಿರುವರು. ಇವಸಲ್ಲಿ 14 ಅಂತಹ ನೋಟುಗಳಿದ್ದವು.

ಅನುಸೂಯಾ (ರಿಜಿಸ್ಟರ್ಡ್)

ಸಿದ್ಧ ಮಹಾತ್ಮರಿಂದ ದೊರೆತಿರುವ ಈ ಮೂಲಿಕೆಯು ಗೂರಲು ರೋಗ ನಿವಾರಣೆ ಮಾಡುವುದರಲ್ಲಿ ಪ್ರಖ್ಯಾತವಾದುದು. 16–2–46 ನೇ ಪೂರ್ಣಿಮೆ ದಿವಸ ಒಂದು ಹೊತ್ತು ಮಾತ್ರ ಸೇವಿಸಿದರೆ ಗೂರಲು ಸಂಪೂರ್ಣವಾಸಿಯಾಗುವುದು. ಇಂಗ್ಲೀಷಿನಲ್ಲಿ ಬರೆಯಿರಿ. ಕ್ಷಯ ರೋಗಕ್ಕೂ ಇಲ್ಲಿ ಮೂಲಿಕೆ ಔಷಧ ಕೊಡಲಾಗುವುದು.

Sri Sant Sewa Ashram
P.O. Chitrakot. U.P. Dt. Banda

ಮೈಸೂರು ಸಿಟಿ ರೇಷನಿಂಗ್ ನೋಟಿಫಿಕೇಷನ್

No. R I- 60/45

ಮೈಸೂರುಸಿಟಿಯಲ್ಲಿರುವ ಮಹಮ್ಮದೀಯರಿಂದ ನಡೆಸಲ್ಪಡುವ ಎಲ್ಲಾ ಕೇಷರ್ ಡಿಪೋಗಳು ಇದೇ ಮಾಹೆ 30 ನೇ ತಾರೀಖು ಬುಧವಾರ 'ಅಷ್ಟೈರುವಾರು ಕುಂಬ' ದ ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್

ತಾ|| 21–1–46 ಮೈಸೂರು

ಕರ್ಣನ ಕರುಣ ಕಥೆ

ಕರ್ಣನು ಕನ್ಯಾ ಪುತ್ರನಾದ್ದರಿಂದ ಆವನನ್ನು ಕೂಸಿರುವಾಗಲೇ ಬಿಸಾಟಿ ಬಿಟ್ಟರು ಈ ಬಿಸಾಟಿ ಬಿಟ್ಟ ಕೂಸು ಮಹಾರಥಿಯಾದದ್ದು ಹೇಗೆ ನೋಡೋಣ.

ಕೌರವ ಮಧ್ಯದಲ್ಲಿ ಕರ್ಣನು ಸೂತ ಕುಲದವನೆಂದು ಬೆಳೆಯ ಹತ್ತಿದನು. ಆದ್ದರಿಂದ ಎಲ್ಲರ ಗುರುವಾದ ದ್ರೋಣಾಚಾರ್ಯನು ಆವನಿಗೆ ಅಸ್ತ್ರವಿದ್ಯೆಯನ್ನು ಕಲಿಸಲಿಕ್ಕೆ ಒಪ್ಪಲಿಲ್ಲ

ಆದರೆ ಕರ್ಣನ ಹವ್ಯಾಸ ವೆಂತಹದು? ಆವನು ಮಹೇಂದ್ರ ಪರ್ವತಕ್ಕೆ ಹೋಗಿ ಅಲ್ಲಿ ಬ್ರಾಹ್ಮಣ ಕುಲದವನೆಂದೆ ಹೇಳಿ ಪರಶುರಾಮನ ಪರಶುರಾಮನ ಶಿಷ್ಯನಾದನು. ಕಾಲಾನುಸಾರವಾಗಿ ಬ್ರಹ್ಮಾಸ್ತ್ರವನ್ನೊಳಗೊಂಡು ಹಾವತೂ ದಿವ್ಯ ಮತ್ತು ಪ್ರಚಂಡವಾದ ಅಸ್ತ್ರಗಳನ್ನು ಹಸ್ತಗತ ಮಾಡಿಕೊಂಡನು. ಪರಶುರಾಮನಾದರೂ ಕರ್ಣನ ಕೌಶಲ್ಯಕ್ಕೆ ಮೆಚ್ಚಿದ್ದಲ್ಲದೆ ಗಂಧರ್ವ, ಯಕ್ಷ, ರಾಕ್ಷಸರಲ್ಲಿಯೂ ಕರ್ಣನು ಹೆಸರಾದನು'

ಆದರೆ ಇಲ್ಲಿಯೂ ಕರ್ಣನ ವಿಧಿಯು ಆವನ ಬೆನ್ನು ಬಿಡಲಿಲ್ಲ. ಒಂದು ದಿನ ಗುರುವು ಆವನ ತೊಡೆಯ ಮೇಲೆ ಮಲಗಿದ್ದಾಗ್ಯೆ ಆವನ ತೊಡೆಯನ್ನು ಒಂದು ಗುಂಗೀ ಹುಳುವು ತೂರೆಯ ಹತ್ತಿತು ಗುರುಗಳ ನಿದ್ರಾಭಂಗವಾಗಬಾರದೆಂದು ಕರ್ಣನು ಅಸಹ್ಯ ವೇದನೆಯನ್ನು ಮಿಸುಕದೆ ಸಹನ ಮಾಡಿಕೊಂಡನು. ಗುರುವು ಎಚ್ಚತ್ತು ನೋಡಿದಾಗ್ಯೆ ಈ ತರದ ಗಟ್ಟಿಗ ತನವು ಬ್ರಾಹ್ಮಣನಿಗೆ ಸಾಧ್ಯವಿಲ್ಲೆಂದೂ ಇವನು ಕ್ಷತ್ರಿಯನಾಗಿರಲಿಕ್ಕೆ ಬೇಕೆಂದೂ ತಿಳಿದು ಶಾಪದಿಂದ ಕರ್ಣನಿಗೆ ಅಸ್ತ್ರಗಳು ಸಮಯ ಒದಗಾಗ್ಯೆ ನಿರುಪಯೋಗ ಆಗುವಂತೆ ಮಾಡಿದನು ಪರಶುರಾಮನು ಕ್ಷತ್ರಿಯರ ಪರಮ ಶತ್ರು ವಾದ್ದರಿಂದ ಇದರಲ್ಲಿ ಆಶ್ಚರ್ಯವೇನೂ ಇಲ್ಲ.

ಇತ್ತ ಕೌರವ ಪಾಂಡವರ ನಡುವೆ ಮಹಾ ಯುದ್ಧವು ಪ್ರಾರಂಭವಾಗುವದಿತ್ತು. ಶ್ರೀ ಕೃಷ್ಣನು ಸಂಧಾನಕ್ಕೆ ಬಂದಾಗ್ಯೆ ಕರ್ಣನನ್ನು ಬದಿಗೆ ಕರೆದು ಹೀಗೆ ಹೇಳಿದನು:

'ಇಲ್ಲಿ ನೋಡು ಕರ್ಣ, ನೀನು ಸೂರ್ಯನ ಮಗನು. ನಿನ್ನನ್ನು ಮೋಸಲೆಯೆ ಮಂತ್ರದಿಂದ ಕುಂತಿಯು ಪಡೆದಳು. ನೀನು ಸೂತ ಕುಲದವನಲ್ಲ ನೀನು ಪಿಟಿಯ ಪಾಂಡವನು.

ನಿನಗೆ ಕೌರ್ಯದಲ್ಲಿ ಯಾರೂ ಇದಿರಿಲ್ಲ. ಕೌರವನಿಗೆಯೆ, ಹುಸಿನಾದ ವೆನ್ನುವದನ್ನು ಬಿಟ್ಟು, ನನ್ನ ಸಂಗಡ ನಡೆ. ನಾನು ನಿನ್ನನ್ನು ಕೌರವ ಪಾಂಡವರಿಬ್ಬರಿಗೂ ರಾಜನನ್ನಾಗಿ ಮಾಡುತ್ತೇನೆ. ನಾನು ನಿನ್ನ ಹಿತವನ್ನೇ ಬಯಸುತ್ತಿರುವೆ. ಇದರಲ್ಲಿ ಎಳ್ಳಷ್ಟೂ ಅಸತ್ಯವಿಲ್ಲ' ಈ ಮಾತುಗಳನ್ನು ಕೇಳಿ ತಾನು ತಾನು ಸೂರ್ಯನ ಮೆಗನೆಂದು ಗೊತ್ತಾದೊಡನೆ ಆ ಕಡುಗಲಿಯು ಕೊರಳ ಸೆರೆ ಹಿಗ್ಗಿದ್ದರಲ್ಲಿ ಏನಾಶ್ಚರ್ಯ! ಆದರೆ ಅವನು ಚಿಂತಿಸಿದ್ದು ಆಗ್ಯೂ ದುರ್ಯೋಧನನ ಹಿತನೇ!' ಈ ಕೃಷ್ಣನು ಭೇಧದಿಂದ ಕೌರವನನ್ನು ಕೊಂಡನು.

'ಇತ್ತ ಕಾದಿ ಕೊಲ್ಲಬೇಕೆಂದರೆ ಪಾಂಡವರು ನನ್ನ ಸಹೋದರರು. ಕಾದಲಿಲ್ಲವಾದರೆ ಅನ್ನದಾತನೂ ಕೀರ್ತಿದಾತನೂ ಆದ ಕೌರವನಿಗೆ ಎರಡು ಬಗೆದಂತಾಗುತ್ತದೆ'. ಹೀಗೆಂದು ವಿಚಾರಿಸಿ ಅವನು ಶ್ರೀ ಕೃಷ್ಣನಿಗೆ ನುಡಿದದ್ದೇನೆಂದರೆ; ವರುಳು ಮಾಧವಾ!. ನಾನು ಮಹಿಮೆಯ ರಾಜ್ಯಕ್ಕೆ ನಾನ ಸೋಲುವವನಲ್ಲ.

ನೀನು ಇಂದು ಹೇಳಿದ್ದರಿಂದ ನನಗೆ ಸೂರ್ಯನ ಮಗನೆಂದು ಗೊತ್ತಾಯಿತಲ್ಲದೆ ಇದಾವುದನ್ನೂ ಲಕ್ಷಿಸದೆ ಕುರುಪತಿಯು ನನ್ನನ್ನು ಬೆಳೆಸುಸಿ ಅಂಗ ದೇಶದ ರಾಜನನ್ನಾಗಿ ಮಾಡಲಿಲ್ಲವೆ? ನಿನ್ನ ಸಂಗಡ ಬರುವದು ನನಗೆ ಹೇಗೆ ಶಕ್ಯವಾದೀತು? ಎಲ್ಲಿ ಕುರುಪತಿಯೋ ಅಲ್ಲಿಯೇ ಕರ್ಣನೆಂದು ತಿಳಿ. ಆದರೆ ನೀನು ಕೇಳಿಕೊಳ್ಳುವಂತೆ ನಾನು ನಿನ್ನ ಐವರು ಏಕಾಂತನ್ನು ನೋಯಿಸದೆ ರಣ ಚಂಡಿಗೆ ಈ ದೇಹವನ್ನು ಬಲಿ ಕೊಟ್ಟು ಅನ್ನದಾತನ ಋಣವನ್ನು ತೀರಿಸುತ್ತೇನೆ'

ಇದನ್ನು ಕೇಳಿ ಹರ್ಷಿತನಾದ ಶ್ರೀ ಕೃಷ್ಣನು ಕುಂತಿಯನ್ನು ಕಳಿಸಿ ತೊಟ್ಟ ಬಾಣವನ್ನು ಮತ್ತೆ ತೊಡದಂತೆಯೂ ತಮ್ಮಂದಿರನ್ನೂ ಕಾಯುವಂತೆಯೂ ಕರ್ಣನಿಂದ ಆಶ್ವಾಸವನ್ನು ದೊರಕಿಸಿದ ಮಹಾದಾನಿಯೂ ಪ್ರಾಥ ಪ್ರತಾಪಿಯೂ ಆದ ಇಂಥ ಮಹಾಂಥಿ ಕರ್ಣನನ್ನು ಹೆತ್ತ ಭಾರತ ಮಾತೆಯು ಧನ್ಯಳಲ್ಲವೇ?

ಟೈಪ್ ರೇಟಿಂಗ್ ಸ್ಪರ್ಧೆ

ಕಲ್ಕತ್ತಾದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಮದರಾಸಿನ ಶ್ರೀ ಎಸ್. ವಿ. ರಾಮಣ್ ಎಂಬವರು ನಿಮಿಷಕ್ಕೆ 75 ಪದಗಳನ್ನು ಹೊಡೆದು ಸ್ಪರ್ಧೆಯ ಬಹುಮಾನ ಪಡೆದರು.

ವಿವಿಧ ವೃತ್ತ

.....

ಕಾಂಗ್ರೆಸ್ ಉಮೇದುವಾರರಾದ ಶ್ರೀ ಜಿ. ವಿ. ಮಾವಲಂಕರರು ಕೇಂದ್ರ ಅಸೆಂಬ್ಲಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರೆಂದು ದೆಹಲಿಯ ವಾರ್ತೆ.

o o

ಹೆಚ್ಚು ಮೌಲ್ಯದ ನೋಟುಗಳ ಸಂಬಂಧದಲ್ಲಿ ಬೊಂಬಾಯಿ ಹೈ ಕೋರ್ಟಿನ ಜ || ಕಾನಿಯಾರವರು ಕೊಟ್ಟ ತೀರ್ಪಿನ ಮೇಲೆ ಶ್ರೀ ಕೆ. ಎಂ. ಮುನ್ಷಿಯವರು ಅಪೀಲು ಮಾಡಿರುವದು.

o o

ಪಂಡಿತ ಜವಹರಲಾಲರು ಚುನಾವಣೆ ಪ್ರಚಾರಕ್ಕಾಗಿ ಜಾನ್ಸಿಗೆ ಹೋದಾಗ ಅವರಿಗೆ ಬಳ್ಳಿ ಭಂಗಾರವ ತಲಾಭಾರ ನಡೆಸಿ ಅವೆಲ್ಲವನ್ನೂ ಅವರಿಗೆ ಕೊಡಲಾಗುವುದೆಂದು ಅಲ್ಲಿಯ ಕಾಂಸ್ ಸಮಿತಿ ತೀರ್ಮಾನಿಸಿದೆ.

o o

ಬೊಂಬಾಯಿನಲ್ಲಿ ಸಿನ್ನೇ ದಿವಸ ಮತ್ತೆ ಗಲಭೆಯಾಗಿ ಪೋಲೀಸರು ಗುಂಡು ಹಾರಿಸಿದರೆಂದೂ, ಕೆಲ ಸಾವು ನೋವು ಆಯಿತೆಂದೂ ಹೇಳಲಾಗಿದೆ.

o o

ಬೆಂದೂರು ಪಾರಸಭಾಧ್ಯಕ್ಷರ ಚುನಾವಣೆ ಸಂಬಂಧದಲ್ಲಿ ಉಂಟಾದ ಅಸಮಾಧಾನಕ್ಕಾಗಿ 8 ಮಂದಿ ಸದಸ್ಯರು ರಾಜೀನಾಮೆ ಇತ್ತಿರುವರು.

o o

ಫ್ರಾನ್ಸಿನ ಮುಖ್ಯ ಮಂತ್ರಿಯಾದ ರಾಜೀನಾಮೆ ಕೊಟ್ಟ ಡಿಗಾಲರ ಸ್ಥಾನದಲ್ಲಿ ಸೋಷಿಯಲಿಸ್ಟರಾದ ಫೆಲಿಕ್ಸ್ ಗ್ವಾನರವರು ಚುನಾಯಿಸಲ್ಪಟ್ಟರು.

o o

ಬ್ರಿಟಿಷ್ ಪಾರ್ಲಿಮೆಂಟರೀ ನಿಯೋಗದವರು ನಿನ್ನೇ ಗಾಂಧೀಜಿಯವರನ್ನು ಭೇಟಿ ಮಾಡಿ ಒಂದೂವರೆ ಘಂಟೆ ಕಾಲ ಸಂಭಾಷಣೆ ನಡೆಸಿದರು.

o o

ಇನ್ನು 6 ತಿಂಗಳಲ್ಲಿ 14 ಲಕ್ಷ ಕೆಲಸಗಾರರಿಗೆ ಉದ್ಯೋಗವನ್ನು ಒದಗಿಸ ಬೇಕಾಗುವುದು, ಕೈಗಾರಿಕಾ ಯೋಜನೆಯನ್ನು ಶೀಘ್ರದಲ್ಲೇ ಕೈಗೊಳ್ಳದಿದ್ದರೆ ಅಪಾಯ ಎಂದು ಕಾಂಗ್ರೆಸ್ ಸದಸ್ಯರಾದ ಶ್ರೀ ಬಾಲಕೃಷ್ಣ ಶರ್ಮರು ದೆಹಲಿ ಕೇಂದ್ರ ಅಸಂಜ್ಞೆಯಲ್ಲಿ ತಿಳಿಸಿದರು.

ವಿವಿಧ ವರ್ತಮಾನ

.....

ಕಾಂಗ್ರೆಸ್ ಮಹಾಧಿವೇಶನ ನಡೆಯುವ ಪ್ರದೇಶ ಮತ್ತು ದಿವಸವನ್ನು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಲ್ಪಡುವುದೆಂದು ಅಖಿಲಭಾರತ ಕಾಂಗ್ರೆಸ್ಸಿನ ಜನರಲ್ ಸೆಕ್ರಟರಿ ಕೈಪಾಲಿನ ತಿಳಿಸಿರುವುದಾಗಿ ದೆಲ್ಲಿವಾರ್ತೆ ತಿಳಿಸುವುದು.

o o

ಟೋಕಿಯೋ, ಜ23—ಜಪಾನ್ ಪಾರ್ಲಿಮೆಂಟರಿಯ ಎಲ್ಲಾ ಉಪ ಮಂತ್ರಿಗಳು ಮತ್ತು ಪ್ರಿನ್ಸಿಪಾಲರುಗಳು ತಮ್ಮ ಕಾಜೇನಾಮೆಯ ಪತ್ರವನ್ನು ಪ್ರಧಾನಿ ಬ್ಯಾರನ್ ಸಿಡೆಹಿರಾರವರಿಗೆ ಅರ್ಪಿಸಿದರು. ಬರುವ ಮಹಾ ಚುನಾವಣೆಯಲ್ಲಿ ರಾಜ್ಯವು ನಿಷ್ಪಕ್ಷಪಾತವಾಗಿ ನಡೆಯಲೆಂದು ಅವರು ಈರೀತಿ ಮಾಡಿರುವರು.

o o

ಬೇರೆಯಲ್ಲಿ ಜ 23—ಇಲ್ಲಿಯ ಜೈಲಿನ 8 ಮಂದಿ ಖೈದಿಗಳು ಉಪವಾಸವ್ರತ ಕೈಗೊಂಡಿದ್ದಾರೆ.

o o

ಬ್ಯಾಂಗ್‌ಕಾಕ್ ಜ 24—ಲಾಡ್ ಮೌಂಟ್‌ಬ್ಯಾಟನ್‌ರಿಗೆ ಇಲ್ಲಿ ಮಹಾರಾಜರು ಸನ್ಮಾನಿಸಿ "ಆರ್ಡರ್ ಆಫ್ ವೈಟ್ ಎಲಿಫೆಂಟ್ ಪ್ರಶಸ್ತಿ ಕೊಟ್ಟರು"

o o

ನಾವೆಲ್ಲರೂ ಭಾರತೀಯರಾಗಿರೋಣ ಹಿಂದು, ಮುಸ್ಲಿಂ ಎಂಬ ಭೇದವನ್ನು ತ್ಯಜಿಸೋಣ ಎಂಬುದಾಗಿ ಸರ್ವ ಕೋಮುಗಳು ಸೇರಿ ಬೊಂಬಾಯಿನಲ್ಲಿ ನಡೆಸಿದ ನೇತಾಜಿ ದಿನಾಚರಣೆಯಲ್ಲಿ ಲೆ || ಧಿಲ್ಲಾನ್ ಹೇಳಿರುವರು

o o

ಬರ್ಲಿನ್ ಜ 22—ಬ್ರಿಟಿಷ್ ಅಧಿಕಾರಿಗಳಿಗೆ ದೊರೆತಿರುವ ಟ್ರಾಂಟ್ಸಿನ್ ಎಂಬ 18 ವರ್ಷದ ಆಕರ್ಷಣೀಯ ಹುಡುಗಿಯು ತಾನು ಹಿಟ್ಲರಿನ ಮಗಳೆಂದು ಹೇಳುತ್ತಿರುವಳು.

o o

ಕುನ್ನೂರು ಜ 21—ಅಮೆರಿಕಾದ್ಯಂತ ಕೋರ್ಸ್ ವಿಶ್ವವಿದ್ಯಾನಿಲಯದಲ್ಲಿ ಅಕ್ಕೆ ಪರೀಕ್ಷೋಧನೆ ಕಾರ್ಯದಲ್ಲಿ ತೊಡಗಿರುವ ಭಾರತ ವಿದ್ಯಾರ್ಥಿಯು ಅಲ್ಲಿ ನಡೆದ ಫ್ರಾನ್ಸಿಡ್ರೈಸ್ ಸ್ಪರ್ಧೆಯಲ್ಲಿ ಗಾಂಧಿಜಿಯವರ ವೇಶ ತಾಳಿದ್ದು 100 ಡಾಲರ್ ಬಹುಮಾನ ಪಡೆದನು.